SPL.C.SC/ST No.23/2024
P.W.-6
C.W.-10

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

## SPL.C.SC/ST No.23/2024

ಇಂದು ದಿನಾಂಕ- **01.07.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ಹನುಮನಗೌಡ |
| ತಂದೆ ಹೆಸರು- | ಲಿಂಗನಗೌಡ |
| ವಯಸ್ಸು- | 62 ವರ್ಷ |
| ಉದ್ಯೋಗ- | ವ್ಯವಸಾಯ |
| ವಾಸಸ್ಥಳ- | ಮಲ್ಲಾಪುರ |

**ಮುಖ್ಯ ವಿಚಾರಣೆ - ಪ್ರಾಜ್ಞ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ-9 ರವರು ನನಗೆ ಗೊತ್ತು. ಅವರು ಈಗ ಮೃತಪಟ್ಟಿರುತ್ತಾರೆ. 9 ವರ್ಷಗಳ ಹಿಂದೆ ಒಂದು ದಿನ ನನ್ನನ್ನು 1 ನೇ ಆರೋಪಿಯ ಹೊಲದ ಬಳಿ ಪೊಲೀಸರು ಕರೆದುಕೊಂಡು ಹೋಗಿದ್ದರು. ಆಗ ಚಾಸಾ-9 ರವರು ಸಹ ನನ್ನ ಜೊತೆ ಅಲ್ಲಿಗೆ ಬಂದಿದ್ದರು. ಅಲ್ಲಿ ಗಲಾಟೆಯಾಗಿತ್ತು ಎಂದು ಹೇಳಿದರು. ಚಾಸಾ-1 ರವರು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿದರು. ಅಲ್ಲಿ ಪೊಲೀಸರು ಮಹಜರನ್ನು ಬರೆವಣಿಗೆ ಮಾಡಿದರು ಹಾಗೂ ಫೋಟೋ ತೆಗೆದರು. ಆಗ ಸಂಜೆ 04.30 ರಿಂದ 05.00 ಗಂಟೆಯಾಗಿತ್ತು. ಸದರಿ ಬರೆವಣಿಗೆ ಮಾಡಿದ ದಾಖಲೆಗೆ ನನ್ನ ಸಹಿ ಪಡೆದರು. ಅದನ್ನು ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿ ಸಹಿ ಗುರುತಿಸಿರುವ ದಾಖಲೆಯನ್ನು ನಿ.ಪಿ.3 ಎಂದೂ

ಹಾಗೂ ಅದರಲ್ಲಿ ಸಾಕ್ಷಿ ಗುರುತಿಸಿರುವ ಸಹಿಯನ್ನು ನಿ.ಪಿ.3-ಎ ಎಂದು ಗುರುತಿಸಲಾಯಿತು. ನಾನು ಈಗ ನಿ.ಪಿ.-2 ರ ಫೋಟೋವನ್ನು ನೋಡುತ್ತಿದ್ದು ಅದರಲ್ಲಿ ನಾನು, ಚಾಸಾ-9, 1, 7 ಹಾಗೂ ಇಬ್ಬರು ಪೊಲೀಸರು ಕಾಣುತ್ತಿದ್ದೇವೆ.

**<u>ಪಾಟೀಸವಾಲು - ಆರೋಪಿತರ ಪರ ವಕೀಲರಿಂದ -</u>**

2. ನನ್ನನ್ನು ಪಂಚನಾಮೆಗೆ ಬರಲು ಪೊಲೀಸರು ಬಂದು ಕರೆದರು. ನನ್ನನ್ನು ಕರೆಯಲು ಬಂದ ಪೊಲೀಸರು ಡಿವೈಎಸ್‌ಪಿ. ನನ್ನನ್ನು ಕರೆಯಲು ಬಂದಾಗ ಚಾಸಾ-9 ರವರು ನನ್ನ ಜೊತೆ ಇದ್ದರು. ಪೊಲೀಸರ ಜೊತೆ ಆಗ ಜೀಪಿನಲ್ಲಿ ಬೇರೆ ಯಾರೂ ಇರಲಿಲ್ಲ. ಪೊಲೀಸರು ನನ್ನನ್ನು ಕರೆಯಲು ಬಂದಾಗ ನಾನು ನನ್ನ ಮನೆಯಲ್ಲಿದ್ದೆನು. ಆ ದಿನ ಯಾವ ದಿನಾಂಕ, ವಾರ ಆಗಿತ್ತು ಎಂದು ನನಗೆ ನೆನಪಿಲ್ಲ. ಸಾಕ್ಷಿ ಮುಂದುವರಿದು ನುಡಿಯುತ್ತಾರೆ, ಬಹಳ ಸಮಯವಾಗಿರುವ ಕಾರಣ ನೆನಪಿಲ್ಲ. ಪೊಲೀಸರು ನನ್ನನ್ನು ಕರೆಯಲು ಬಂದಾಗ ಸಂಜೆ 04.30 ರಿಂದ 05.00 ಗಂಟೆಯಾಗಿತ್ತು. ನನ್ನನ್ನು ಹಾಗೂ ಚಾಸಾ-9 ರವರನ್ನು ಪೊಲೀಸರು ಜೀಪಿನಲ್ಲಿ ಕರೆದುಕೊಂಡು ಹೋದರು. ಸುಮಾರು 15-20 ನಿಮಿಷದಲ್ಲಿ ನಾವು 1 ನೇ ಆರೋಪಿಯ ಹೊಲದ ಬಳಿ ಹೋದೆವು. ಸದರಿ ಹೊಲ ಯಾರ ಹೊಲವೆಂದು ನನಗೆ ಗೊತ್ತಿಲ್ಲ, ಆದರೆ ಅದು ವಿರುಪಣ್ಣ ಹಾಗೂ ದ್ಯಾಮಮ್ಮರವರಿಗೆ ಮಾಡಿಸಿರುವುದಾಗಿ ಜಗಳವಾಗಿದೆ ಎಂದು ಹೇಳಿದರು. ನಾವು ಹೊಲಕ್ಕೆ ಹೋದಾಗ ಚಾಸಾ-1 ಮತ್ತು 7 ರವರು ಅಲ್ಲಿದ್ದರು. ಅಲ್ಲಿ ನೀವು ಅರ್ಧ ಗಂಟೆ ಇದ್ದಿರೇ ಎಂದರೆ ಸಾಕ್ಷಿ ನುಡಿಯುತ್ತಾರೆ, ಹೌದು. ಪೊಲೀಸರು ನಿ.ಪಿ.-3 ಅನ್ನು ಅಲ್ಲಿಯೇ ಬರೆದರೆ ಅಥವಾ ಠಾಣೆಯಲ್ಲಿ ಬರೆದರೇ ಎಂದರೆ ಸಾಕ್ಷಿ ನುಡಿಯುತ್ತಾರೆ, ಅಲ್ಲಿಯೇ

ಬರೆದಿರುತ್ತಾರೆ. ನಿ.ಪಿ.-3 ಅನ್ನು ಯಾರು ಬರೆದರು ಎಂದರೆ ಸಾಕ್ಷಿ ನುಡಿಯುತ್ತಾರೆ, ಸಾಹೇಬರ ಜೊತೆ ಒಬ್ಬರು ಬರೆಯಲು ಬಂದಿದ್ದರು, ಅವರೂ ಸಹ ಆಫೀಸರೇ. ನನಗೆ ಓದಲು ಬರುವುದಿಲ್ಲ. ನಾನು ಕೇವಲ ಸಹಿ ಮಾಡುತ್ತೇನೆ. ನನಗೆ ಓದಲು ಬಾರದ ಕಾರಣ ನಿ.ಪಿ.-3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ, ನನಗೆ ಓದಿ ಹೇಳಿದರು. ನಿ.ಪಿ.-3 ರನ್ನು ಬರೆದ ಆಫೀಸರೇ ನನಗೆ ಅದನ್ನು ಓದಿ ಹೇಳಿದರು. ನಿ.ಪಿ.-3 ಅನ್ನು ಬರೆದ ಆಫೀಸರು ನಾವು ಜೀಪಿನಲ್ಲಿ ಹೋಗುವಾಗ ನಮ್ಮ ಜೊತೆ ಬಂದಿದ್ದರು. ನನಗೆ ಆ ಆಫೀಸರ ಹೊಸರು ಗೊತ್ತಿಲ್ಲ. ಅವರು ಗಂಗಾವತಿ ಠಾಣೆಗೆ ಸಂಬಂಧಪಟ್ಟವರು. ಗಂಗಾವತಿಯಲ್ಲಿ ಯಾವ ಠಾಣೆಗೆ ಸಂಬಂಧಪಟ್ಟವರೆಂದು ನನಗೆ ಗೊತ್ತಿಲ್ಲ. ನಿ.ಪಿ.-3 ಅನ್ನು ಬರೆಯಲು ಚಾಸಾ-1 ರವರು ಮಾಹಿತಿ ಕೊಟ್ಟರು. ಚಾಸಾ-1 ರವರನ್ನು ಗಂಗಮ್ಮ ಹಾಗೂ ರೇಣುಕಮ್ಮ ಎಂದು ಕರೆಯುತ್ತಾರೆ. ಚಾಸಾ-1 ರವರು ನನಗೆ ಸಂಬಂಧಿಕರಲ್ಲ, ಅವರು ನನ್ನ ಕುಲಸ್ಥರು. ನಾನು ಸಹ ವಾಲ್ಮೀಕಿ ಜನಾಂಗಕ್ಕೆ ಸೇರಿದವನು ಎಂದರೆ ಸರಿ. ನನ್ನ ತಮ್ಮನ ಮಗಳನ್ನು ಚಾಸಾ-1 ರವರ ಮೈದುನನಿಗೆ ಮದುವೆ ಮಾಡಿ ಕೊಡಲಾಗಿದೆ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ರವರು ಹತ್ತಿರದ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ-9 ರವರು ನನಗೆ ಸಂಬಂಧದಲ್ಲಿ ಅಳಿಯನಾಗಬೇಕು. ನನ್ನ ಹಾಗೂ ಚಾಸಾ-1, 6 ಮತ್ತು 7 ರವರ ಮಧ್ಯ ಒಳ್ಳೆಯ ಒಡನಾಟ ಹಾಗೂ ಆತ್ಮೀಯತೆ ಇದೆ ಎಂದರೆ ಸರಿಯಲ್ಲ. ನಾನು ಚಾಸಾ-1, 6 ಮತ್ತು 7 ರವರಿಗೆ ಅನುಕೂಲವಾಗಲಿ ಹಾಗೂ ಸಹಾಯವಾಗಲಿ ಎಂದು ನಾನು ಪಂಚನಾಮೆಗೆ ಹೋಗಿದ್ದೆನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನಿ.ಪಿ.-2 ರಲ್ಲಿನ ಹೊಲದ ಸರ್ವೆ ನಂಬರ್ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಅಲ್ಲಿ ಏಕೆ ಪೋಟೋ ತೆಗೆದರು ಎಂದು ನಿಮಗೆ ಗೊತ್ತೇ ಎಂದರೆ ಸಾಕ್ಷಿ ನುಡಿಯುತ್ತಾರೆ, ಅಲ್ಲಿ ಜಗಳವಾಗಿದೆ ಎಂದು ಪೋಟೋ ತೆಗೆದರು. ನಿ.ಪಿ.-2 ರ ಪೋಟೋವನ್ನು ಪಂಚನಾಮೆಯ ಸಮಯದಲ್ಲಿ ತೆಗೆದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.-3 ಅನ್ನು ಸ್ಥಳದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ನಿ.ಪಿ.-3 ಕ್ಕೆ ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-9 ರವರು ಸಹ ಪಂಚನಾಮೆಗೆ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಅವರು ಸಹ ನಿ.ಪಿ.-3 ಕ್ಕೆ ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-14 ರವರು ನನ್ನನ್ನು ಮನೆಯ ಬಳಿ ಬಂದು ಜೀಪಿನಲ್ಲಿ ಸ್ಥಳಕ್ಕೆ ಕರೆದುಕೊಂಡು ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1, 6 ಮತ್ತು 7 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ನಿ.ಪಿ.-3 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

**(ವೇದಮೂರ್ತಿ ಬಿ.ಎಸ್.)**
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಆಸೀನ).